ಪದಬಂಧ



ಎಡದಿಂದ ಬಲಕ್ಕೆ:

1. ಸಾಧುಗಳಿಗೂ ಬೇಕೇ ಅಲಂಕಾರ ಸಾಮಗ್ರಿ? (4)
3. ಆ ಎಲ್ಲ ಲೆಕ್ಕಾಚಾರ ಅಂಕಿ–ಅಂಶಗಳ ಚಿತ್ರ ನಿರೂಪಣೆ (3)
4. ನಶ್ಯವನ್ನು ಬಳಸುವುದೂ ಕೆಟ್ಟ ಚಾಳಿಯಾದೀತು (3)
6. ಮನ ಕರಗುವಂತೆ ಎಂಥ ಸುಂದರ ಹಾಡು (4)
7. ಅಪರಾಧಿಯನ್ನ ಹಿಡಿದಾಗ ಸಿಕ್ಕಿದ್ದೆಲ್ಲ ಬೇರೆಯವರ ಹಣ (4)
8. ಶಾಖಾಹಾರಿಗಳ ಪಾಲಿಗೆ ಈ ಅಡುಗೆ ಮನೆ (4)
10. ಸಾಚಾತನದ ಯಾರೀತ? ಎಂಥ ಒಳ್ಳೆಯ ನಡವಳಿಕೆಯವ! (4)
12. ಬಯಕೆ ಬೇರೇನೇ ಇರಲಿ. ಈಗ ಬರೀ ನೀರಡಿಕೆ (4)
14. ಯೋಜನೆ ಏನೇ ಇದ್ದರೂ, ಇಲ್ಲಿ ಗೆಲುವಿಗೆ ಸೋಲು ಜೊತೆ (4)
16. ವೈಭವ ಬಿಂಬಿಸುವ ಭಾರೀ ಮನೆ (3)
17. ಮರ್ಕಟದ ಕಷ್ಟ ಕಂಡರೆ ಕರುಣೆ ಬಂದೀತು (3)
18. ಕವಳ ಸಿಗುವ ಖಾತ್ರಿ ಇಲ್ಲದೆ ಭಾರೀ ಚಿಂತೆ (4)

ಮೇಲಿಂದ ಕೆಳಕ್ಕೆ:

1. ಆ ಪರಿಕರದ ಸ್ಥಿತಿ, ವಿಪರೀತ ಬಿಸಿ (3)
2. ಅವನ ವಾರ್ತೆಯ ತುಂಬ ಬರೀ ಹೊಸತನ ಇದೆ (3)
3. ಆರಾಧ್ಯ ದೈವಕ್ಕೆ ನಿತ್ಯ ಪೂಜೆ ಮಾಡುವವ ಗೊತ್ತೇ? (4)
5. ಕೆಂಡವನ್ನು ಕಂಡೊಡನೆ ಗಡಗಡ! (3)
7. ಹೊಸ ಪರಿಯ ಮಾತಿನ ವಿನೋದ ಕೇಳಿ (4)
9. ಕಾಣಿಕೆಗಳ ಲೆಕ್ಕ ದಾಖಲಿಸಲು ಸೂಕ್ತ ಪೆನ್ನು (4)
11. ರೋಷ ಬಂದಿರುವ ಗೂಳಿ ನೋಡಿ (3)
13. ಬೆಂಕಿಯನ್ನು ಹಬ್ಬಿಸಿದ್ದು ಎಷ್ಟು ಹೆದರಿಸುವಂತಿತ್ತು! (4)
14. ಕಜ್ಜಾಯವನ್ನು ತಯಾರಿಸಿದ್ದು ಅವನ ಅಪ್ಪ (3)
15. ಮಳೆಯಲ್ಲೇ ಬಂದ ಅವಳಿ ಜೋಡಿ (3)

## 7–8–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಉಪಕಾರ; 3. ಬೇಸರ; 4. ಗಳಿಕೆ; 6. ಅನುದಿನ; 8. ಆಕರ್ಷಕ; 10 ನಗೆಗಾರ; 12. ಶರಾವತಿ; 16. ಲವಣ; 17. ನಿಲಯ; 18. ಸರೋರುಹ.

ಮೇಲಿಂದ ಕೆಳಕ್ಕೆ:

1. ಉರಗ; 2. ರಗಳೆ; 3. ಬೇಗುದಿ; 5. ಕೆಡುಕ; 6. ಅಭ್ಯಂಜನ; 7. ನಭಶ್ಚರ; 8. ಆಶಾಪಾಶ; 9. ಕರಾಮತಿ; 11. ಗಾವಿಲ; 13. ರಾಧೇಯ; 14. ಬಾಣಸ; 15. ಸನಿಹ.

## ಪ್ರಶ್ನಾಂಕಣ

# ಗೆದ್ದಲು- ವಿಶೇಷ ಏನು?

ಗೆದ್ದಲು–ಅದೊಂದು ಕೀಟ; 'ಇರುವೆ ಗಾತ್ರ'ದ್ದೇ ಕೀಟ. ಹಾಗಾಗಿಯೇ 'ಬಿಳಿ ಇರುವೆ' ಎಂದು ಅದು ತಪ್ಪಾಗಿ ಪ್ರಸಿದ್ಧ ವಾಸ್ತವವಾಗಿ ಇರುವೆ–ಗೆದ್ದಲುಗಳ ನಡುವೆ ಗಾತ್ರ ಮತ್ತು ಸಂಘ ಜೀವನ ಕ್ರಮ ಇವೆರಡೇ ಸಾಮ್ಯ. ಇನ್ನೆಲ್ಲ ವಿಧಗಳಲ್ಲೂ ಗೆದ್ದಲುಗಳು ಇರುವೆಗಳಿಂದಿರಲಿ, ಉಳಿದೆಲ್ಲ ಕೀಟಗಳಿಂದಲೂ ವಿಭಿನ್ನ. ಗೆದ್ದಲುಗಳ ಪರಮ ವಿಸ್ಮಯದ ಕೆಲ ವಿಶೇಷಗಳು:

ಗೆದ್ದಲುಗಳ ಚಕ್ಷು ರಹಿತ ಕೀಟಗಳು (ಚಿತ್ರ–1). ಹಾಗೆ ಸಂಪೂರ್ಣ ದೃಷ್ಟಿರಹಿತವಾಗಿದ್ದೂ ಅವು ಹದಿನೈದು ಕೋಟಿ ವರ್ಷಗಳಿಂದ ಯಶಸ್ವೀ ಬದುಕು ನಡೆಸುತ್ತಿವೆ. ಎರಡು ಸಾವಿರ ಪ್ರಭೇದಗಳಾಗಿ ವಿಕಾಸಗೊಂಡಿವೆ.

ಸಂಘ ಜೀವನ ನಡೆಸುವ ಪ್ರತಿ ಗೆದ್ದಲ ಕುಟುಂಬದಲ್ಲೂ ಒಂದು ರಾಣಿ, ಒಂದು ಗಂಡು, ಹೇರಳ ಕೆಲಸಗಾರರು ಮತ್ತು ಸೈನಿಕರು ಎಲ್ಲ ಸೇರಿ ಕನಿಷ್ಠ ಹತ್ತು ಲಕ್ಷ, ಗರಿಷ್ಠ ಮೂವತ್ತು ಲಕ್ಷ ಸದಸ್ಯರಿದ್ದು ಅದ್ಭುತದ, ಸಾಮರಸ್ಯದ, ಸಹಬಾಳ್ವೆ ನಡೆಸುತ್ತವೆ.

ಗೆದ್ದಲುಗಳದು ತುಂಬ ಮೆತ್ತಗಿನ ಶರೀರ, ಬಿಸಿಲನ್ನು ಕಿಂಚಿತ್ತೂ ಸಹಿಸದ ಚರ್ಮ. ಆದ್ದರಿಂದಲೇ ತಾವೇ ನಿರ್ಮಿಸುವ ಮಣ್ಣಿನ ಪದರದ ಮರೆಯಲ್ಲಿ ಅಥವಾ ನೆಲದ ಅಡಿಯಲ್ಲಿ ಅಥವಾ ಹುತ್ತದ ಅಂತರ್ಯದಲ್ಲಿ... ಒಟ್ಟಾರೆ ಅಂಧಕಾರದಲ್ಲೇ ಅವುಗಳ ಬದುಕು. ಗೆದ್ದಲ ಹುತ್ತಗಳದು ನಾನಾ ರೂಪ (ಚಿತ್ರ–2). ಗೋಪುರಗಳಂತೆ ಗೋಡೆಗಳಂತೆ, ತೆರೆದಿಟ್ಟ ಕೊಡೆಗಳಂತೆ, ಬಹು


1


2

ಚಿಮಣಿಗಳ ಕಟ್ಟಡಗಳಂತೆ ಭಿನ್ನ ಭಿನ್ನ ಸ್ವರೂಪ; ಬೆರಗುಗೊಳಿಸುವ ಗಾತ್ರ ಕೂಡ. ಇಪ್ಪತ್ತು ಅಡಿ ಎತ್ತರದ, ನೂರು ಅಡಿ ಸುತ್ತಳತೆಯ, ನೆಲದ ಕೆಳಗೆ ಹಲವಾರು ಎಕರೆ ವಿಸ್ತಾರಕ್ಕೆ ಹರಡಿದ ಹುತ್ತಗಳು ಪತ್ತೆಯಾಗಿವೆ.

ಗೆದ್ದಲ ಕುಟುಂಬದ 'ರಾಣಿ'ಯದು 'ಮೊಟ್ಟೆ ಇಡುವ ಯಂತ್ರ'ದಂಥ ಬದುಕು. ನಿರಂತರ ಪ್ರತಿದಿನ ಐದು ಸಾವಿರದಿಂದ ಮುವ್ವತ್ತು ಸಾವಿರ ಮೊಟ್ಟೆಗಳನ್ನಿಡುವ ರಾಣಿಯ ಆಯುಷ್ಯ ಇಪ್ಪತ್ತರಿಂದ ನೂರು ವರ್ಷ! ಗಂಡಿನದೂ ಅಷ್ಟೆ. ಆದರೆ ಇತರೆಲ್ಲ ಸದಸ್ಯರದು ಆರೇ ತಿಂಗಳು ಮೀರದ ಆಯಸ್ಸು!

ಸೆಲ್ಯುಲೋಸ್ ಅನ್ನು ಜೀರ್ಣಿಸಿಕೊಳ್ಳಬಲ್ಲ ಸಾಮರ್ಥ್ಯದ ಗೆದ್ದಲುಗಳ ಹುತ್ತದ ಅಂತರಾಳದಲ್ಲಿ ಬೂಷ್ಟುಗಳ ಕೃಷಿಯನ್ನೂ ನಡೆಸುತ್ತವೆ. ಇನ್ನೂ ವಿಸ್ಮಯ ಏನೆಂದರೆ ಎರೆಹುಳುಗಳು ವಾಸ ಹೂಡದ ಕಡಿಮೆ ತೇವದ ಮತ್ತು ಜೇಡಿಮಣ್ಣು ಹರಡಿದ ನೆಲೆಗಳಲ್ಲಿ ಗೆದ್ದಲುಗಳು ನೆಲದ ಫಲವತ್ತತೆಗೆ ನೆರವು ನೀಡುತ್ತವೆ.

■ ಎನ್. ವಾಸುದೇವ್